
ಎರಡು ಲೇಖನಗಳಿದ್ದಾಗ್ಯೂ, ಅದೇ ಪಥದ ಯುವ ಕಲಾವಿದ ವೀರೇಶ ರುದ್ರಸ್ವಾಮಿಯವರ ಕುರಿತ ಮತ್ತೊಂದು ಪ್ರತ್ಯೇಕ ಲೇಖನಕ್ಕೇ ಅವಕಾಶ ದೊರೆತಿದೆ.

ನಂದಲಾಲ್ ಬೋಸ್ ಅವರ ಬಗ್ಗೆ ಬರಹವೊಂದು ಇದೆಯಾದರೂ ಅವರನ್ನು ಪ್ರಭಾವಿಸಿದ ರವಿವರ್ಮರ ಕುರಿತು ಒಂದು ಸಾಲಿನ ಉಲ್ಲೇಖವೂ ಇಲ್ಲ. ಮುಖ್ಯವಾಗಿ ಪಥಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಕೃತಿಯನ್ನು ರೂಪಿಸಿರುವ ಉಪಕ್ರಮವೇ ಯಾವುದೇ ಪಥಕ್ಕೆ ಸೇರಿಲ್ಲದ, ಪಂಥಾತೀತ ಕಲಾವಿದರನ್ನು ಒಳಗೊಳ್ಳುವಲ್ಲಿ ಒಂದು ಅಡ್ಡಿಯಾದಂತಿದೆ. ಆದರೆ ಇಂಥವರ ಕುರಿತು ಪ್ರಾಸಂಗಿಕ ಉಲ್ಲೇಖಗಳಿಗೂ ಅವಕಾಶವೇ ಇರಲಿಲ್ಲವೆಂದು ಹೇಳಲಾಗದು. ಹೆಸರೂ ಪ್ರಸ್ತಾಪವಾಗದಂತೆ ಹೊರಗುಳಿಸಿರುವ ಈ ಕ್ರಿಯೆಗೆ ಸಂಬಂಧಿಸಿದಂತೆ ಲೇಖಕರಿಗೆ ಇದ್ದಿರಬಹುದಾದ ಸಮರ್ಥನೆಗಳನ್ನು ಅವರು ಅಲ್ಲಲ್ಲಿ ಸೂಚಿಸಿದ್ದರೆ ಚೆನ್ನಾಗಿತ್ತೇನೋ ಎನಿಸುತ್ತದೆ.

ಈ ಕೃತಿಯಲ್ಲಿ ಪ್ರತಿಯೊಂದು ಕಲಾಪಥದ ಬಹುಚರ್ಚಿತ ಕಲಾವಿದರು ಮತ್ತು ಕಲಾಕೃತಿಗಳ ಜೊತೆಗೆ, ಅಷ್ಟೇನೂ ಚರ್ಚೆಗೊಳಗಾಗದ ಕಲಾವಿದರು ಮತ್ತು ಕಲಾಕೃತಿಗಳನ್ನೂ ಕೂಡ ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಹಾಗಾಗಿ ಕೆಲವು ಕಲಾಕೃತಿಗಳ ಕುರಿತ ಇಲ್ಲಿನ ಬರಹಗಳು ಹೊಚ್ಚಹೊಸದಾಗಿವೆ. ಅದಕ್ಕಿಂತ ಮುಖ್ಯವಾಗಿ ಕಲಾಕೃತಿಯೊಂದನ್ನು ಲೇಖಕ ಮತ್ತು ಕಲಾವಿದ ಎರಡೂ ಆಗಿರುವ ವ್ಯಕ್ತಿತ್ವವೊಂದು ಕಂಡರಿಸುತ್ತಿರುವುದರಿಂದಾಗಿ ಈ ಬರಹಗಳ ನೋಟಕ್ರಮವೇ ಒಂದು ಬಗೆಯಲ್ಲಿ ವಿಶಿಷ್ಟವಾದುದಾಗಿದೆ. ಅದು ಇತ್ತ ಕೇವಲ ಸಾಹಿತಿಯೊಬ್ಬನ ಬಣ್ಣದ ಮಾತುಗಳ ಸೃಜನಶೀಲ ಸ್ಪಂದನೆ ಮಾತ್ರವೂ ಆಗದೆ, ಅತ್ತ ಕಲಾವಿದನ ಕೂದಲು ಸೀಳುವ ಬಗೆಯ ತಾಂತ್ರಿಕ ಪರಿಭಾಷೆಗಳಿಂದ ಇಡಿಕಿರಿದ ಕಲಾವಿಮರ್ಶಾ ಬರಹವೂ ಆಗದೆ ಒಂದು ಹೊಸ ಹದದಲ್ಲಿ ಮೈದಾಳಿದೆ. ಕೆಲವೊಮ್ಮೆ ಎರಡೂ ಅಲ್ಲದ ಮತ್ತೂ ಕೆಲವೊಮ್ಮೆ ಎರಡೂ ಹೌದಾದ, ಇನ್ನೂ ಕೆಲವೆಡೆ ಇವೆರಡನ್ನೂ ಮೀರಿದ ರೀತಿಯ ಬಗೆಯುವಿಕೆಯಾಗಿಯೂ ಮೂಡಿಬಂದಿದೆ.

ಕಲಾವಿದನ ಜೀವನ, ಕಲಾಪಥದ ಮಾಹಿತಿ, ಒಂದು ನಿರ್ದಿಷ್ಟ ಕಲಾಕೃತಿಯ ವಿಮರ್ಶೆ,




**ಮಾತಿಗಿಳಿದ ಚಿತ್ರ**
ಲೇ: ಲಕ್ಷ್ಮಣ ಬಾದಾಮಿ
ಪು: 207; ಬೆ: ರೂ. 700
ಪ್ರ: ಬಸವ ಕಲಾನಿಕೇತನ ಪ್ರಕಾಶನ,
ಗುಂಡನಪಲ್ಲಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
ಫೋನ್: 9972095772

ಆತನ/ಆಕೆಯ ಇತರೆ ಕೆಲವು ಮುಖ್ಯ ಚಿತ್ರಗಳ ಮತ್ತು ಒಟ್ಟಾರೆಯಾಗಿ ಆತನ/ಆಕೆಯ ಅನನ್ಯ ಮುದ್ರಿಕೆಯವರೆಗೆ ಚಾಚಿಕೊಂಡ ವಿಶ್ಲೇಷಣೆ – ಹೀಗೆ ಇಲ್ಲಿನ ಪ್ರತಿ ಬರಹವೂ ಇದೇ ಚೌಕಟ್ಟಿನಲ್ಲಿ ರೂಪಿತವಾಗಿದೆ. ಕಲಾವಿದರ ರೂಪಣೆಯಲ್ಲಿ ಮಹತ್ವದ ಪಾತ್ರ ವಹಿಸುವ ಅವರ ಜೀವನ ಮತ್ತು ಅವರ ಕಲಾಪಥಗಳ ಕುರಿತ ವಿವರಗಳ ಜೊತೆಯಲ್ಲಿಯೇ, ಅವರ ಕೆಲವಾರು ಪ್ರಾತಿನಿಧಿಕ ಕೃತಿಗಳು ಕೂಡ ಅಲ್ಲೇ ನೋಡಲು ಸಿಗುವಂತೆ ಮುದ್ರಣಗೊಂಡಿರುವುದರಿಂದ ಓದುಗನಿಗೆ ಪ್ರತಿಯೊಂದು ಕಲಾಪಥದ ಬಗೆಗೂ ಸಮಗ್ರವಾದ ಕಲ್ಪನೆಯು ಸಿಗುವಂತಾಗಿದೆ. ಕೆಲವು ಕಲಾವಿದರ ಜೀವನ ವಿವರಗಳು ಮತ್ತು ಬದುಕಿನುದ್ದಕ್ಕೂ ಅವರು ಹಾದುಬಂದ